

ಅವಶೇಷಗಳ ರೂಪದಲ್ಲಿ '9ನೇ ಕೋಟೆ'



ಕಾನಾಸ್‌ನ ಮೋಹಕ ತಾಣ 'ಲಿಬರ್ಟಿ ಅವೆನ್ಯೂ'

ಬೆಳ್ಳನೆಯ ಕಟ್ಟಡ ನಿಂತಿತ್ತು. 1542ರಲ್ಲಿ ಇದರ ಮೊದಲ ಬುನಾದಿ ಹಾಕಲಾಗಿತ್ತಾದರೂ ನಂತರದ ಶತಮಾನಗಳಲ್ಲಿ ಹಲವು ಬಾರಿ ಮಾರ್ಪಡಿಸಲಾಯಿತು. ಕೆಲವಷ್ಟು ಕಾಲ ಚರ್ಚ್ ಆಗಿದ್ದು, ನಂತರದಲ್ಲಿ ಮದ್ದು ಗುಂಡುಗಳನ್ನಿಡುವ ಸ್ಥಳವಾಗಿ, ರಷ್ಯನ್ ದೊರೆಗಳ ವಾಸಸ್ಥಾನವಾಗಿ, ಕ್ಲಬ್, ಥಿಯೇಟರ್ ಹೀಗೆ ಹಲವು ಬದಲಾವಣೆಗಳ ನಂತರ ಅದನ್ನು ಟೌನ್ ಹಾಲ್ ಎಂದು 1869ರಲ್ಲಿ ಅಂಗೀಕರಿಸಲಾಯಿತು.

ಟೌನ್ ಹಾಲ್‌ನ ಸಂದರ್ಶನ ಮುಗಿಸುವಷ್ಟರಲ್ಲಿ ಊಟದ ಸಮಯವಾಗಿತ್ತು. ಹತ್ತಿರದಲ್ಲೇ ಇದ್ದ ಹೋಟೆಲ್ ಒಂದರಲ್ಲಿ ಊಟ ಮುಗಿಸಿದೆವು. ಮುಂದೆ ಅಲ್ಲಿದ್ದ ಬಹಳಷ್ಟು ವಸ್ತು ಸಂಗ್ರಹಾಲಯದಲ್ಲಿ ಆಸಕ್ತಿಕರವೆನಿಸಿದ ಡೆವಿಲ್ ಮ್ಯೂಸಿಯಂ ನೋಡೋಣವೆಂದು ಹೊರಟೆವು. ಅದೊಂದು ಕುತೂಹಲಕಾರಿ ಸಂಗ್ರಹಾಲಯ. ಲಿಥುವೇನಿಯಾದ ವರ್ಣಚಿತ್ರಕಾರ ಅಂಟಾನಸ್ ಎಂಬುವಾತ ತನ್ನ ಹವ್ಯಾಸವಾಗಿ ದೇಶದ ವಿವಿಧ ಭಾಗಗಳಲ್ಲಿ ಕಥೆಯಾಗಿ ಪ್ರಚಲಿತದಲ್ಲಿದ್ದ ಭೂತ, ರಾಕ್ಷಸರ ಸಣ್ಣ ಪುಟ್ಟ ಪ್ರತಿಮೆಗಳನ್ನು ಸಂಗ್ರಹಿಸಲು ಪ್ರಾರಂಭಿಸಿದ. ಕ್ರಮೇಣ ಅವನ ಸಂಗ್ರಹದಲ್ಲಿ ವಿವಿಧ ದೇಶಗಳ ಪುರಾಣಗಳ ರಾಕ್ಷಸ ಮೂರ್ತಿಗಳು ಬಂದು ಸೇರಿದವು. ಅವನ ಕಾಲಾನಂತರ ಖಾಸಗಿಯಾಗಿದ್ದ ಈ ಸಂಗ್ರಹಾಲಯ ಸಾರ್ವಜನಿಕರಿಗಾಗಿ ತೆರೆದುಕೊಂಡಿತು. ಅಲ್ಲಿ ಲಿಥುವೇನಿಯಾದ ಜಾನಪದ ಕಥೆಗಳಲ್ಲಿ ಬರುವ ಚಿತ್ರವಿಚಿತ್ರ ರಾಕ್ಷಸರ ಪ್ರತಿಮೆಗಳಿವೆ. ಅವುಗಳಿಗೆ ಹೊಂದಿಕೊಂಡಂತಹ ಕುತೂಹಲಕಾರಿ ನಂಬಿಕೆಗಳು, ಕಥೆಗಳೂ ಇವೆ. ಇದಲ್ಲದೆ ಪ್ರಪಂಚದ ವಿವಿಧ ಭಾಗಗಳಲ್ಲಿನ ಮಾಟಗಾತಿಯರ, ಮಾಂತ್ರಿಕರ, ಅಸುರರ ಕಥೆಗಳು, ಅಲ್ಲಿನ ನಂಬಿಕೆಗಳು – ಇವನ್ನೆಲ್ಲ ಬಿಂಬಿಸುವ ಪ್ರಯತ್ನ ಮಾಡಲಾಗಿದೆ. ಭಾರತದ ಬಗ್ಗೆಯೂ ಒಂದು ವಿಭಾಗವಿದ್ದು ರಾಮಾಯಣದ ಕಥೆ, ರಾವಣಾಸುರನ ಕಥೆಯನ್ನು ಸಂಕ್ಷಿಪ್ತವಾಗಿ ಬರೆಯಲಾಗಿದೆ.

ಬೆಳಕು ನಿಧಾನವಾಗಿ ಇಳಿಮುಖವಾಗತೊಡಗಿತ್ತು. ಚಳಿ ಹೆಚ್ಚಾಗತೊಡಗಿತ್ತು. ಅಲ್ಲಿಂದ ನಾವು ನಮ್ಮ ಹೋಟೆಲ್ ಕಡೆಗೆ ಮುಖ ಮಾಡಿದೆವು. ದಾರಿಯಲ್ಲಿ 'ಲೈಸ್ವಿಸ್ ಅಲ್ಲೇ' ಅಥವಾ 'ಲಿಬರ್ಟಿ ಅವೆನ್ಯೂ' ಎಂದು ಹೆಸರಾಗಿದ್ದ ಪಾದಚಾರಿಗಳಿಗೆಂದೇ ಇರುವ ಪ್ರಸಿದ್ಧ ರಸ್ತೆಯೊಂದಕ್ಕೆ ಬಂದೆವು. ಅಲ್ಲಿನ ಇಕ್ಕೆಲಗಳಲ್ಲಿ ಬಹಳಷ್ಟು ಅಂಗಡಿಗಳು, ಥಿಯೇಟರ್‌ಗಳು, ಹೋಟೆಲ್‌ಗಳು, ಆಸ್ಪತ್ರೆಗಳೆಲ್ಲ ಇದ್ದವು. ಸುಮಾರು ಒಂದೂವರೆ ಕಿ.ಮೀ. ನಷ್ಟು ಉದ್ದಕ್ಕೆ ಚಾಚಿಕೊಂಡಿರುವ ಈ ರಸ್ತೆಯ ಒಂದು ಅಂಚಿನಲ್ಲಿ 'ಸಂತ ಮೈಕೆಲ್ ದಿ ಆರ್ಕ್ ಏಂಜೆಲ್ಸ್ ಚರ್ಚ್' ಎಂಬ ಹಳೆಯ ಇಗರ್ಜಿ ಇದೆ. ರಷ್ಯನ್ನರ ಆಡಳಿತ ಸಮಯದಲ್ಲಿ ಕಟ್ಟಲ್ಪಟ್ಟಿರುವುದರಿಂದ ಇದು ನಿಯೊ–ಬೈಜಾಂಟೈನ್ ಮಾದರಿಯಲ್ಲಿದೆ. ಲಿಬರ್ಟಿ ಅವೆನ್ಯೂನ ಇನ್ನೊಂದು ತುದಿಯಲ್ಲಿ ಪ್ರಾಣಿಶಾಸ್ತ್ರಕ್ಕೆ ಸಂಬಂಧಿಸಿದ ಸಂಗ್ರಹಾಲಯವಿದೆ.

ಇವಿಷ್ಟನ್ನೂ ನೋಡಿ ಮುಗಿಸುವಷ್ಟರಲ್ಲಿ ಕತ್ತಲೆ ಕವಿದಿತ್ತು. ನಿರ್ಮಾನುಷವಾದ ಬೀದಿಗಳಲ್ಲಿ ಕ್ರಿಸ್ಮಸ್ ದೀಪಗಳು ಜಗಮಗಿಸುತ್ತಿದ್ದವು. ಬೀಸುತ್ತಿದ್ದ ಶೀತಗಾಳಿ ಬಿಸಿ ಬಿಸಿ ಕಾಫಿಯ ನೆನಪು ತಂದು, ನಾವು ಹತ್ತಿರದಲ್ಲಿದ್ದ ಕೆಫೆಯೊಂದಕ್ಕೆ ಹೊಕ್ಕೆವು.

ಪ್ರತಿಕ್ರಿಯಿಸಿ: feedback@sudha.co.in